**ಸೂಪರ್ ಫಾಸ್ಟ್ ರೈಲು ಹಾಗೂ ೨/೨ ಸುಖಾಸೀನ ಬಸ್ಸಿನಲ್ಲಿ, ರೂಂ ವಸತಿ, ಮತ್ತು ನಮ್ಮ ಊಟೋಪಚಾರದೊಂದಿಗೆ ೨೦೧೨ರ ಸುವ್ಯವಸ್ಥಿತ ಪ್ರವಾಸಗಳು**

- **ಉತ್ತರಭಾರತ ತೀರ್ಥಕ್ಷೇತ್ರ ಮತ್ತು ಚಾರೋಧಾಮ್ ಯಾತ್ರೆ 27 ದಿನಗಳು** — **ಸೆಪ್ಟೆಂಬರ್ 20**

ಆಗ್ರಾ, ಮಥುರ, ಬೃಂದಾವನ್, ತಾಜ್‌ಮಹಲ್, ಅಕ್ಬರ್‌ಕೋಟೆ, ಅಲಹಾಬಾದ್, ಬುದ್ಧಗಯಾ, ಗಯಾ, ವಾರಣಾಸಿ(ಕಾಶಿ), ಅಯೋಧ್ಯಾ, ಹರಿದ್ವಾರ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಶ್ರೀಕೇದಾರನಾಥ್, ಶ್ರೀಬದರಿನಾಥ್, ಋಷಿಕೇಶ್, ನವದೆಹಲಿ.

- **ಚಾರೋಧಾಮ್ ಪ್ರವಾಸ 20 ದಿನಗಳು** — **ಸೆಪ್ಟೆಂಬರ್ 27**

ನವದೆಹಲಿ–ಹರಿದ್ವಾರ–ಯಮುನೋತ್ರಿ–ಉತ್ತರಕಾಶಿ–ಗಂಗೋತ್ರಿ–ಶ್ರೀಕೇದಾರನಾಥ್–ಶ್ರೀಬದರಿನಾಥ್–ಋಷಿಕೇಶ್–ನವದೆಹಲಿ.

- **ಪಂಚದ್ವಾರಕಾ ಮತ್ತು ಅಷ್ಟ ಜ್ಯೋತಿರ್ಲಿಂಗ ಯಾತ್ರೆ 24 ದಿನಗಳು** — **ನವೆಂಬರ್ 15**

ಪುಷ್ಕರ್–ಕಾಂಕ್ರೋಲಿ–ಏಕಲಿಂಗ್ಜಿ–ಉದಯ್‌ಪುರ್–ಮೌಂಟ್‌ಅಬೂ–ಸಿದ್ಧಿಪುರ (ಮಾತೃಗಯಾ)–ಅಹ್ಮದಾಬಾದ್–ದ್ವಾರಕಾ–ಬೇಟ್‌ದ್ವಾರಕಾ–ದಾರುಕವನಂನಾಗೇಶಂ–ಮೂಲದ್ವಾರಕಾ–ಹರಿಸಿದ್ಧಿಮಾತಾ–ಪೋರ್‌ಬಂದರ್–ಸೋಮನಾಥ್–ಡಾಕೋರ್–ಉಜ್ಜೈನಿ–ಓಂಕಾರೇಶ್ವರ–ಶಿರಡಿ–ಶನಿಸಿಂಗನಾಪುರ್–ತ್ರಯಂಬಕೇಶ್ವರ್–ಭೀಮಾಶಂಕರ್–ಘೃಷ್ಣೇಶ್ವರ–ಪರ್ಲಿವೈದ್ಯನಾಥ್.

- **ಪವಿತ್ರ ಕೈಲಾಸ ಮತ್ತು ಮಾನಸ ಸರೋವರ ಯಾತ್ರೆ 15 ದಿನಗಳು** — **ಜುಲೈ 25**

ಕಠ್ಮಂಡು–ಮಾನಸಸರೋವರ–ಕೈಲಾಸಪರ್ವತ–ಕಠ್ಮಂಡು.

- **ಮಧ್ಯಪ್ರದೇಶ ರಾಜ್ಯ ಪ್ರವಾಸ 20 ದಿನಗಳು** — **ಡಿಸೆಂಬರ್ 03/10**

ಓಂಕಾರೇಶ್ವರ–ಉಜ್ಜೈನಿ–ಮಾಂಡೂರು–ಸಾಂಚಿ–ಅಮರಕಂಟಕ್–ಬೇಡಾಘಾಟ್–ಪಚಮಡಿ–ಖಜರಾಹೋ–ಚಿತ್ರಕೂಟ–ಅಲಹಾಬಾದ್.

**ವಿವರಗಳಿಗೆ ಸಂಪರ್ಕಿಸಿ:–**


ಶ್ರೀ ದಂತಿ ಟ್ರಾವಲ್ಸ್

S D T

|| Sri Deviramma Prasanna ||

**Sri Danti Travels®**

*Recognised by Department of Tourism, Govt. of Karnataka*

#19, I.T.I Layout, Near State Bank of Hyderabad, B.S.K. 3rd Stage, Kattriguppe main Road
Bangalore - 85, Ph- Fax: 080 - 26917507, Mob: 9945341289 / 9845410504
URL: www.sridantitravels.com, E-mail: info@sridantitravels.com / sridantitravels@yahoo.com



# ಜ್ಞಾನಯೋಗದ ಪ್ರಜ್ವಲ ಬೆಳಕು

ಸಂಪಾದಕೀಯ

ಜ್ಞಾನಯೋಗವು ಸ್ವಾಮಿ ವಿವೇಕಾನಂದರ ಯೋಗ ಪ್ರವಚನಗಳಲ್ಲೆಲ್ಲ ಅತಿ ವಿಸ್ತಾರವಾದ ಹರವು ಉಳ್ಳದ್ದು. ಭಾರತೀಯ ತತ್ತ್ವಶಾಸ್ತ್ರದ ತಿರುಳನ್ನು ಆಧುನಿಕ ವೈಜ್ಞಾನಿಕ ವಿಧಾನ ಮತ್ತು ಪರಿಭಾಷೆಯಲ್ಲಿ ಪ್ರಸ್ತುತಪಡಿಸಿರುವ ಯುಗಪರಿವರ್ತಕ ಗ್ರಂಥ ಇದು. ಧರ್ಮವು ಮಾನವ ಜೀವಿತದಲ್ಲಿ ಎಷ್ಟು ಅವಶ್ಯಕ ಎಂದು ಎತ್ತಿ ತೋರಿಸುವ ಸ್ವಾಮೀಜಿ, ಅನಂತರ ಮಾನವನನ್ನೇ ಧರ್ಮದ ಗಂಭೀರವಾದ ಅಧ್ಯಯನದ ವಿಷಯವನ್ನಾಗಿ ಮಾಡಿಕೊಳ್ಳುತ್ತಾರೆ. ಮಾನವನಲ್ಲಿರುವ ಅಸೀಮ, ಅನಂತ ಸಾಧ್ಯತೆಗಳ ಆಕರವೆಂಬಂತೆ ಆತ್ಮವನ್ನು ಬಿಂಬಿಸುತ್ತ, ಅದರ ಅಜ್ಞಾನವೆಂಬುದು ವಸ್ತುಸ್ಥಿತಿ ಎಂದು ಹೇಳುತ್ತಾರೆ. ವಿರೋಧಾಭಾಸಗಳಿರುವ ಈ ಅಜ್ಞಾನದ ವಾಸ್ತವಸ್ಥಿತಿಯೇ 'ಮಾಯೆ' ಎಂದು ವಿವರಿಸುತ್ತಾರೆ. ಇದರಿಂದ ಬಿಡುಗಡೆಗೊಳ್ಳುವ ಉಪಾಯವನ್ನು ವೈಜ್ಞಾನಿಕ ವಿಧಾನದಲ್ಲಿ ತಿಳಿಸಿಕೊಡುವ ಸ್ವಾಮೀಜಿ, ಆತ್ಮ ಎಂದೆಂದೂ ಅಮರವೇ ಆಗಿದೆ; ಹೀಗಾಗಿ ಬಂಧನ, ದುರ್ಬಲತೆಗಳೆಲ್ಲವೂ ಕೇವಲ ಭ್ರಮೆ ಎಂದು ಘೋಷಿಸುತ್ತಾರೆ. 'ಬ್ರಹ್ಮಾಂಡ' ಮತ್ತು 'ಜೀವಿ' – ಇವೆರಡಕ್ಕೂ ಆಧಾರಭೂತವಾದುದು ಒಂದೇ ಚೈತನ್ಯ ವಸ್ತು ಎಂದು ತರ್ಕಬದ್ಧವಾಗಿ, ಹಂತಹಂತವಾಗಿ ವಿವರಿಸುವ ಸ್ವಾಮೀಜಿ, ಅದನ್ನು ಅರಿತು ಜೀವನದ ಪ್ರತಿ ಘಟ್ಟದಲ್ಲಿಯೂ ಕಾರ್ಯರೂಪಕ್ಕೆ ತರುವುದೇ ಅಮರತ್ವದ ಹಾದಿ ಎಂದು ಬೋಧಿಸುತ್ತಾರೆ.

**ಧರ್ಮದ ಆವಶ್ಯಕತೆ:** ಮಾನವ ಜನಾಂಗದ ಭವಿಷ್ಯವನ್ನು ರೂಪಿಸಲು ಇದುವರೆಗೆ ಅನೇಕ ಶಕ್ತಿಗಳು ತಮ್ಮ ಪ್ರಭಾವವನ್ನು ಬೀರಿವೆ ಮತ್ತು ಬೀರುತ್ತಿವೆ. ಆದರೆ ಅವುಗಳಲ್ಲಿ ಧರ್ಮದಷ್ಟು ಪ್ರಭಾವಶಾಲಿಯಾದುದು ಮತ್ತಾವುದೂ ಇಲ್ಲ ಎಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಡುತ್ತಾರೆ. ಧರ್ಮವು ಮರಣ ಹೊಂದಿದವರ ಆರಾಧನೆಯ ಮೂಲಕ ಅಥವಾ ಪ್ರಕೃತಿಯ ಶಕ್ತಿಗಳ ಉಪಾಸನೆಯ ಮೂಲಕ ಆರಂಭಗೊಂಡಿರಬಹುದು. ಇವೆರಡರಲ್ಲಿಯೂ ಕಂಡುಬರುವುದು ಇಂದ್ರಿಯಗಳನ್ನು ಮೀರಿ ಹೋಗುವ ಒಂದು ಪ್ರಯತ್ನ. ಈ ಪ್ರಯತ್ನದಲ್ಲಿ ಉಂಟಾಗುವ ಇಂದ್ರಿಯಾತೀತ ಅನುಭವವೇ ಎಲ್ಲ ಧರ್ಮಗಳ ಮೂಲವೆಂದು ಸ್ವಾಮೀಜಿ ಹೇಳುತ್ತಾರೆ. ಧರ್ಮವು ಲೌಕಿಕಕ್ಕಿಂತಲೂ ಮಿಗಿಲಾದ ಆದರ್ಶವನ್ನು ನಮ್ಮ ಮುಂದೆ ಇಡುತ್ತದೆ. ಅದು ಮಾತ್ರವೇ ಮಾನವಜೀವನಕ್ಕೆ ಸಾರ್ಥಕತೆಯನ್ನು ತಂದುಕೊಡುಬಲ್ಲದು. ಈ ಆದರ್ಶದಲ್ಲಿ ಮಾತ್ರವೇ ಮಾನವಜನಾಂಗದ ಶಕ್ತಿಮೂಲವಿರುವುದು. ಧರ್ಮವು ಅಧ್ಯಯನದ ವಿಷಯವಾಗಿಯೂ ಅತಿ ಶ್ರೇಷ್ಠ ಮಟ್ಟದ್ದು. ಅದಲ್ಲದೆ, ತನ್ನ ನೈಜ ಸ್ವಭಾವವನ್ನು ಅರಿತುಕೊಳ್ಳಲು ಮತ್ತು ಆಜನ್ಮಸಿದ್ಧ ಹಕ್ಕಾದ ಅನಂತಶಕ್ತಿಯನ್ನು ಪಡೆದುಕೊಳ್ಳಲು ಧರ್ಮವು ಒಂದು ಮಹಾ ಕ್ರಿಯೋತ್ತೇಜಕ ಶಕ್ತಿಯಾಗಿದೆ. ಇದನ್ನು ಸಾಧಿಸಬೇಕಾದರೆ, ಈಗಿನ ಧರ್ಮಭಾವನೆ ಇನ್ನೂ ವಿಶಾಲ, ಉದಾರವಾಗಬೇಕು. ಆಗ ಮಾತ್ರ ತನ್ನ ಉದ್ದೇಶವನ್ನು ಅದು ಇನ್ನೂ ಹೆಚ್ಚು ಸಮರ್ಥವಾಗಿ ಕಾರ್ಯರೂಪಕ್ಕೆ ತರಬಲ್ಲದು.

**ಮಾನವನ ನೈಜ ಸ್ವರೂಪ:** ಹೊರಗೆ ಕಾಣಿಸುವ ದೇಹದ ಹಿನ್ನೆಲೆಯಲ್ಲಿ ಆಧ್ಯಾತ್ಮಿಕ ಶರೀರವೊಂದಿದೆ ಎಂದು ಅತಿ ಪ್ರಾಚೀನ ಕಾಲದಿಂದಲೂ ಮನುಷ್ಯ ನಂಬುತ್ತ ಬಂದಿದ್ದಾನೆ. ಅದನ್ನೇ 'ಆತ್ಮ'ವೆಂದು ಕರೆಯುತ್ತಾರೆ. ಆತ್ಮವು ಚೈತನ್ಯ ಮತ್ತು ಅನಂತ. ಹೀಗಾಗಿ ಅದು ಎರಡಾಗಿರಲು ಸಾಧ್ಯವಿಲ್ಲ. ಆದರೆ ದೇಹ–ಮನಸ್ಸುಗಳು ಎಷ್ಟು ವಿಧವಾಗಿ ಬೇಕಾದರೂ ಇರಬಹುದು. ಏಕೆಂದರೆ ಅವು ಜಡ. ಇದರಿಂದ ಜಗತ್ತಿನ ಎಲ್ಲ ಜೀವಕೋಟಿಗಳ ಹಿನ್ನೆಲೆಯಲ್ಲಿ ಇರುವ ಆತ್ಮ ಒಂದೇ ಆಗಿದೆ ಎಂದು ತಿಳಿದು ಬರುತ್ತದೆ. ವಿಜ್ಞಾನಿಗಳು ವಿಕಾಸದ (Evolution) ಬಗ್ಗೆ ಹೇಳುತ್ತಾರೆ. ಆದರೆ ಸ್ವಾಮೀಜಿ, ಪ್ರತಿಯೊಂದು ವಿಕಾಸವು ಸಂಕೋಚನವನ್ನೂ (Involution) ಸೂಚಿಸುತ್ತದೆ ಎನ್ನುತ್ತಾರೆ.

ಅವರ ಪ್ರಕಾರ, **"ಮಾನವನು ಬಸವನಹುಳುವಿನಿಂದ ವಿಕಾಸ ಹೊಂದಿದ್ದರೆ, ಕ್ರಿಸ್ತ ಬುದ್ಧರಂತಹ ಸಿದ್ಧಪುರುಷರು ಆಗಲೇ ಆ ಬಸವನಹುಳುವಿನಲ್ಲಿಯೇ ಹುದುಗಿದ್ದರು."** ಇದೇ ರೀತಿ, ಆತ್ಮವೆಂಬುದು ಮಾನವನ ಅತ್ಯಂತ ವಿಕಸನಗೊಂಡ ಸ್ಥಿತಿಯಾದರೆ, ಆ ಆತ್ಮವು ಈಗಾಗಲೇ ನಮ್ಮ ಅಂತರಂಗದಲ್ಲಿ ಹುದುಗಿಕೊಂಡಿರಬೇಕು. ಆತ್ಮವೆನ್ನುವುದೇ ನೈಜಮಾನವ ಸ್ವರೂಪ. ನೈಜಮಾನವನು ಅನಂತನೂ ಸರ್ವವ್ಯಾಪಿಯಾದ ಆತ್ಮಸ್ವರೂಪನೂ ಆಗಿದ್ದಾನೆ. ತೋರಿಕೆಯ ಮಾನವನು ಅದರ ಪರಿಮಿತ ರೂಪ, ಅಂದರೆ ಸಂಕುಚಿತಗೊಂಡ ಸ್ವರೂಪ ಮಾತ್ರ. ಸ್ವಾಮೀಜಿ ಹೀಗೆ ಕರೆಕೊಡುತ್ತಾರೆ: "ಯಾರಿಗಾಗಿ ನೀವು ಚರ್ಚು, ದೇವಸ್ಥಾನಗಳಲ್ಲಿ ಅಳುತ್ತ ಪ್ರಾರ್ಥಿಸುತ್ತಿದ್ದೀರೋ, ಅದು ನಿಮ್ಮ ಅತ್ಯಂತ ಹತ್ತಿರದಲ್ಲಿದೆ. ಅದೇ ನಿಮ್ಮ ಆತ್ಮ; ಅದೇ ನಿಮ್ಮ ಬಾಳು, ದೇಹ ಮತ್ತು ಜೀವನದ ಸರ್ವಸ್ವ; ಅದೇ ನಿಮ್ಮ ಸ್ವರೂಪ...ಈ ತೋರಿಕೆಯ ವ್ಯಕ್ತಿತ್ವ ಒಂದು ಭ್ರಾಂತಿ. ಇದು ತೊಲಗಿದಷ್ಟೂ ನಿಜವಾದ ಆತ್ಮ ವ್ಯಕ್ತವಾಗುವುದು. ಸ್ತ್ರೀ ಪುರುಷರೇ, ಈ ಆತ್ಮನಲ್ಲಿ ಶ್ರದ್ಧೆ ಇಡಿ. ಸತ್ಯವನ್ನು ನಂಬಿ. ಧೈರ್ಯವಾಗಿ ಅದನ್ನು ಅನುಷ್ಠಾನಕ್ಕೆ ತನ್ನಿ... ನೀವು ಪರಿಶುದ್ಧರಾಗುವುದಲ್ಲ, ನೀವು ಈಗಾಗಲೇ ಪರಿಶುದ್ಧರು. ನೀವು ಪರಿಪೂರ್ಣರಾಗುವುದಲ್ಲ, ಏಕೆಂದರೆ ನೀವು ಈಗಾಗಲೇ ಪರಿಪೂರ್ಣರು."

**ಮಾಯೆ ಮತ್ತು ಭ್ರಮೆ:** ವೇದಾಂತದಲ್ಲಿ ಮಾಯೆಯ ಬಗ್ಗೆ ಹಲವು ಭಾವನೆಗಳನ್ನು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ಅತ್ಯಂತ ಸಮೀಚೀನವಾದ ವೈಜ್ಞಾನಿಕ ವ್ಯಾಖ್ಯಾನವನ್ನು ನೀಡುತ್ತಾರೆ. ಅವರ ಪ್ರಕಾರ ಮಾಯೆಯೆಂಬುದು ಒಂದು ಸಿದ್ಧಾಂತವೇ ಅಲ್ಲ; ಅದೊಂದು ವಾಸ್ತವ ಸ್ಥಿತಿಯ ನಿರೂಪಣೆ ಅಷ್ಟೇ. ಯಾವುದರ ನಿರೂಪಣೆ? "ನಾವೇನಾಗಿರುವೆವೋ, ಸುತ್ತಲೂ ಏನನ್ನು ನೋಡುತ್ತೇವೆಯೋ ಅವೆಲ್ಲದರ ನಿರೂಪಣೆ." ನಾವು ನೋಡುತ್ತಿರುವ ಜಗತ್ತಿನ ವಾಸ್ತವ ಸ್ಥಿತಿ ಹೇಗಿದೆ? ವೈರುಧ್ಯಗಳಿಂದ ಕೂಡಿದೆ. ಅಂದರೆ, ಒಳ್ಳೆಯದರ ಜೊತೆಗೆ ಕೆಟ್ಟದ್ದೂ ಇರುತ್ತದೆ. ಈ ಸ್ಥಿತಿಯನ್ನು ಮಾರ್ಪಡಿಸಲಾಗದು. ಈ ವಿರೋಧಾಭಾಸವನ್ನು ಸರಿಪಡಿಸಲಾಗದು. ಇದನ್ನೇ **'ಪ್ರಕೃತಿ'** ಅಥವಾ **'ಮಾಯೆ'** ಎಂದು ಕರೆಯುತ್ತೇವೆ. ಹಾಗೆಂದೇ, "ಈ ಪ್ರಪಂಚದಲ್ಲಿ ಯಾವುದೊಂದನ್ನೂ ಒಳ್ಳೆಯದು ಎಂದಾಗಲಿ, ಕೆಟ್ಟದು ಎಂದಾಗಲಿ ಕರೆಯಲಾರಿರಿ" ಎಂದು ಸ್ವಾಮೀಜಿ ಹೇಳುತ್ತಾರೆ. ಆದರೆ ಮಾನವನು ಪ್ರಕೃತಿ ಅಥವಾ ಮಾಯೆಯನ್ನು ಮೀರಿ ಹೋಗಬಲ್ಲ, ಇದರಿಂದ ಮುಕ್ತನಾಗಬಲ್ಲ. ಸ್ವಾಮೀಜಿಯವರ ಪ್ರಕಾರ, ಎಲ್ಲ ಧರ್ಮಗಳೂ ಹೆಚ್ಚು ಕಡಮೆ, ಪ್ರಕೃತಿಯಿಂದ ಪಾರಾಗಿ ಹೋಗುವುದಕ್ಕೆ ಮಾಡಿದ ಪ್ರಯತ್ನಗಳೇ ಆಗಿವೆ. ಇದೇ ಎಲ್ಲ ಧರ್ಮಗಳ ಗುರಿ ಎಂದು ಸ್ವಾಮೀಜಿ ಘೋಷಿಸುತ್ತಾರೆ.

**ಮಾಯೆ ಮತ್ತು ಭಗವದ್ಭಾವನೆಯ ವಿಕಾಸ:** ನಾಗರಿಕತೆ ಬೆಳೆದಂತೆಲ್ಲ ಮಾನವನೂ ಬೆಳವಣಿಗೆ ಹೊಂದುತ್ತಾನೆ. ಹಾಗೆಯೇ ಅವನು ದೇವರ ಬಗ್ಗೆ ಇಟ್ಟುಕೊಂಡಿರುವ ಭಾವನೆಗಳೂ ವಿಕಾಸ ಹೊಂದುತ್ತ ಹೋಗುತ್ತವೆ. ಆದರೆ ಈ ಪರಿಕಲ್ಪನೆಗಳ ಹಿನ್ನೆಲೆಯಲ್ಲಿರುವ ಮೂಲಭೂತ ಸತ್ಯ ಹಾಗೆಯೇ ಉಳಿದಿರುತ್ತದೆ. ಆದರೆ, ಕರುಣಾಮಯಿಯೂ, ಪ್ರೇಮಸ್ವರೂಪನೂ ಆದ ಭಗವಂತನ ರಾಜ್ಯವಾದ ಈ ಜಗತ್ತಿನಲ್ಲಿ, ಇಷ್ಟೊಂದು ಕಷ್ಟನಷ್ಟಗಳು ಇರುವುದಕ್ಕೆ ಕಾರಣವೇನು ಎಂಬ ಪ್ರಶ್ನೆ ನಮ್ಮನ್ನು ಸದಾ ಕಾಡುತ್ತದೆ. ಈ ಸಮಸ್ಯೆಯನ್ನು ಕೇವಲ ಸಾಕಾರ ದೇವರ (Personal God) ಕಲ್ಪನೆಯಿಂದ ಮಾತ್ರ ಪರಿಹರಿಸಲಾಗುವುದಿಲ್ಲ. ಇದನ್ನೇ ಉಪನಿಷತ್ತಿನ ಋಷಿಗಳು ಆಳವಾಗಿ ವಿಶ್ಲೇಷಿಸಿ, ಉತ್ತರವನ್ನು ಕಂಡುಕೊಂಡರು. ಇದರ ಫಲವೇ ನಮಗೆ ಇಂದು ದೊರಕಿರುವ ವೇದಾಂತ ತತ್ತ್ವ. ಅದರಲ್ಲಿ ಸಾಕಾರ ಭಾವನೆಯನ್ನೂ ಮೀರಿದ ನಿರಾಕಾರ ಭಗವಂತನ (Impersonal God) ಬಗೆಗಿನ ಉನ್ನತ ಭಾವನೆಗಳನ್ನು ಕಾಣುತ್ತೇವೆ. ಇದೇ ಉಪನಿಷತ್ತುಗಳ ಅಥವಾ ವೇದಾಂತದ ವೈಶಿಷ್ಟ್ಯ.

**ಮಾಯೆ ಮತ್ತು ಮುಕ್ತಿ :** ಜೀವನವೆಂಬುದು ವಿರೋಧಾಭಾಸಗಳ ಕಂತೆ ಎಂದು ಈಗಾಗಲೇ ನಾವು ತಿಳಿದುಕೊಂಡಿದ್ದೇವೆ. ಈ ಪರಿಸ್ಥಿತಿಯನ್ನು ನಿಭಾಯಿಸಲು ಎರಡು ಮಾರ್ಗಗಳಿವೆ. ಒಂದು, **ಪ್ರವೃತ್ತಿ ಮಾರ್ಗ** – ಸಾಮಾನ್ಯ ಜನರ ಹಾಗೆ ಜಗತ್ತಿನ ಸಂಕಷ್ಟಗಳಿಗೆ ತಲೆಯೊಡ್ಡಿಕೊಂಡು ಬದುಕುವುದು. ಇನ್ನೊಂದು **ನಿವೃತ್ತಿ ಮಾರ್ಗ** – ಈ ಜೀವನ ನಶ್ವರ ಎಂಬ ಅಂತರಂಗದ ವಾಣಿಯನ್ನು ಆಲಿಸಿ ದಿವ್ಯತೆಯ ಅಥವಾ ಭಗವಂತನ ಕಡೆಗೆ ಮುನ್ನಡೆಯುವುದು. ಈ ಎರಡನೆಯ ಮಾರ್ಗವನ್ನೇ ನಾವು **'ಧರ್ಮ'** ಎಂದು ಕರೆಯುವುದು. ಮಾನವನು ಪ್ರಕೃತಿಯ ದಾಸ್ಯದಿಂದ ಮುಕ್ತನಾಗುವ ಪ್ರಯತ್ನವನ್ನೇ ವಿವಿಧ ಧರ್ಮಗಳು ಸಂಕೇತಿಸುತ್ತವೆ. ಅಂತಹ ಪ್ರಯತ್ನಗಳಲ್ಲಿ ವೇದಾಂತ ತತ್ತ್ವವು ಅತಿ ಉಚ್ಚಮಟ್ಟದ್ದಾಗಿದೆ ಹಾಗೂ ಅತ್ಯಂತ ವೈಜ್ಞಾನಿಕವಾಗಿದೆ.

**ಬ್ರಹ್ಮ ಮತ್ತು ಜಗತ್ತು :** ಅನಂತವಾದ ನಿರಪೇಕ್ಷ ಸತ್ಯವೇ ಜಗತ್ತಿನ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ ಎಂದು ಉಪನಿಷತ್ತುಗಳು ಘೋಷಿಸುತ್ತವೆ. ಹಾಗಾದರೆ, ನಿರಪೇಕ್ಷವಾದ ಸತ್ಯವು ಸಾಪೇಕ್ಷವಾದ ಈ ಜಗತ್ತಿನ ರೂಪದಲ್ಲಿ ಕಾಣಿಸಿಕೊಳ್ಳುವುದಾದರೂ ಹೇಗೆ? ಅನಂತವಾದದ್ದು ಸಾಂತವಾದದ್ದು ಹೇಗೆ? ಇದು ಉತ್ತರಿಸಲು ಬಹಳ ಕಷ್ಟಕರವಾದ ಪ್ರಶ್ನೆ. ಈ ಪ್ರಶ್ನೆಯೇ ಅತಾರ್ಕಿಕ ಎಂದು ಸ್ವಾಮೀಜಿ ಹೇಳುತ್ತಾರೆ. ಕಾರಣ, ಅನಂತದ ನೆಲೆಯಲ್ಲಿ ಸಾಂತವು ಗೋಚರಿಸುವುದೇ ಇಲ್ಲ. ನಿರಪೇಕ್ಷದ ನೆಲೆಯಲ್ಲಿ ಸಾಪೇಕ್ಷವು ಕಾಣಿಸುವದೇ ಇಲ್ಲ. ಈ ಜಗತ್ತು ಸಾಪೇಕ್ಷವಾದುದು ಮತ್ತು ಸಾಂತವಾದುದು. ಹೀಗಾಗಿ ಈ ಜಗತ್ತಿನ ನೆಲೆಯಲ್ಲಿ ಇದ್ದುಕೊಂಡು, ನಾವು ನಿರಪೇಕ್ಷವನ್ನು ಗ್ರಹಿಸಲಾರೆವು. ಅದೇ ರೀತಿ, ನಿರಪೇಕ್ಷ ಮತ್ತು ಅನಂತದ ನೆಲೆಯಲ್ಲಿ ಸಾಪೇಕ್ಷ ಹಾಗೂ ಸಾಂತವಾದ ಈ ಜಗತ್ತನ್ನು ಅನುಭವಿಸಲಾರೆವು. ಹೀಗಾಗಿ ಮೇಲಿನ ಪ್ರಶ್ನೆಗೆ ಆಧಾರವೇ ಇಲ್ಲ ಎಂದು ಸ್ವಾಮೀಜಿ ಪ್ರತಿಪಾದಿಸುತ್ತಾರೆ. ಅವರ ಪ್ರಕಾರ,

ಸಾಪೇಕ್ಷ ಅಥವಾ ಸಾಂತವೆನ್ನುವುದೇ ಇಲ್ಲ. ಇರುವುದು ಅನಂತ ಮತ್ತು ನಿರಪೇಕ್ಷವಾದ ಸತ್ಯವೊಂದೇ.

**ಕಾಲ, ದೇಶ, ಕಾರ್ಯಕಾರಣಗಳ ಚೌಕಟ್ಟು:** ಆ ಸತ್ಯ ಅಥವಾ ಪರಬ್ರಹ್ಮವನ್ನು ಕಾಲ, ದೇಶ, ಕಾರ್ಯ–ಕಾರಣಗಳೆಂಬ ಗಾಜಿನಂತೆ ಇರುವ ಅಂಶಗಳ ಮೂಲಕ ನೋಡಿದಾಗ, ಅದು ಜಗತ್ತಾಗಿ ಕಾಣುತ್ತದೆ, ಅಷ್ಟೇ. ಕಾಲ, ದೇಶ, ಕಾರ್ಯ–ಕಾರಣಗಳನ್ನೇ ನಾವು 'ಮಾಯೆ' ಅಥವಾ 'ಪ್ರಕೃತಿ' ಎಂದು ಕರೆಯುವುದು. ಹೀಗಾಗಿ ಪ್ರಕೃತಿಯ ಅಥವಾ ಮಾಯೆಯ ಚೌಕಟ್ಟಿನೊಳಗೆ ಮಾತ್ರವೇ ಪರಬ್ರಹ್ಮವು ಜಗತ್ತಾಗಿ ತೋರುತ್ತದೆ. ಕಾಲ, ದೇಶ, ಕಾರ್ಯ–ಕಾರಣಗಳನ್ನು 'ಉಪಾಧಿಗಳು' ಎಂದು ಕರೆಯುತ್ತಾರೆ. ಇವು ನಿರಪೇಕ್ಷವಾದ ಸತ್ಯವನ್ನು ಸೀಮಿತಗೊಳಿಸುತ್ತವೆ. ಹೀಗಾಗಿ ಅವುಗಳಿಗೆ ನೈಜ ಅಸ್ತಿತ್ವವಿದೆ ಎಂದು ಹೇಳಲಾಗದು. ಅವುಗಳ ಎಲ್ಲೆಯನ್ನು ಮೀರಿದಾಗ, ಉಳಿಯುವುದೇ ಅನಂತ, ನಿರಪೇಕ್ಷ ತತ್ತ್ವ. ಇದನ್ನು ಸಮುದ್ರ ಮತ್ತು ಅಲೆಗಳಿಗೆ ಹೋಲಿಸಬಹುದು. ಅಲೆಗಳು ನಮಗೆ ಪ್ರತ್ಯೇಕವಾಗಿ ಕಾಣಿಸಿಕೊಂಡರೂ, ಅವುಗಳ ಅಸ್ತಿತ್ವ ಇರುವುದು ಸಮುದ್ರದಲ್ಲಿಯೇ. ಹಾಗೆಯೇ, ದೇಶ, ಕಾಲ, ಕಾರ್ಯ–ಕಾರಣಗಳಿಂದ ಕಂಡುಬರುವ ಬಗೆಬಗೆಯ ಜೀವಿಗಳ ಅಸ್ತಿತ್ವಕ್ಕೆ ಆಧಾರವಾದುದು ಒಂದೇ ನಿರಪೇಕ್ಷ ತತ್ತ್ವ. ಅದೇ ನೈಜ ಸತ್ಯ.

**ವಿಕಾಸದ ಅಂತರಾರ್ಥ:** ಈ ಹಿನ್ನೆಲೆಯಲ್ಲಿ ವಿಕಾಸದ ನೈಜಾರ್ಥವನ್ನು ನಾವು ಅರಿತುಕೊಳ್ಳಬಹುದು. ಅನಂತವೂ ನಿರಪೇಕ್ಷವೂ ಆದ ತನ್ನ ಆತ್ಮಸ್ವರೂಪವನ್ನು ಪ್ರಕಟಗೊಳಿಸಿಕೊಳ್ಳಲು ವ್ಯಕ್ತಿಯು ನಡೆಸುವ ಸಂಘರ್ಷದಲ್ಲಿಯೇ ವಿಕಾಸವು ಅರ್ಥಪೂರ್ಣವಾಗುವುದು ಎಂದು ಸ್ವಾಮೀಜಿ ಹೇಳುತ್ತಾರೆ. ಇದು ಸಾಧ್ಯವಾಗುವುದು ವ್ಯಕ್ತಿಗತ ಪರಿವರ್ತನೆಯ ನೆಲೆಯಲ್ಲಿ ಮಾತ್ರ. ಎಲ್ಲ ಧರ್ಮ, ನೀತಿ, ಸಾಧನೆ ಮತ್ತು ಕರ್ಮಗಳು ಮಾನವನಲ್ಲಿ ಆಂತರಿಕ ಪರಿವರ್ತನೆಯನ್ನು ಪರಿಣಾಮಕಾರಿಯಾಗಿ ತರುವಲ್ಲಿ ಯಶಸ್ವಿಯಾಗಬೇಕು. ಆಗಮಾತ್ರವೇ ಅವು ನಿಜಕ್ಕೂ ಆಧ್ಯಾತ್ಮಿಕ ಮಹತ್ವವನ್ನು ಪಡೆದುಕೊಳ್ಳುವವು; ಬದುಕನ್ನು ಸಾರ್ಥಕವನ್ನಾಗಿ ಮಾಡುವವು.

**ದೇವರೆಲ್ಲದರಲ್ಲಿ:** ವೇದಾಂತದಲ್ಲಿ ನಾವು ಉನ್ನತಮಟ್ಟದ ತ್ಯಾಗಭಾವನೆಯನ್ನು ನೋಡುತ್ತೇವೆ. ವೇದಾಂತದ ಪ್ರಕಾರ ತ್ಯಾಗವೆಂದರೆ, ಪ್ರಪಂಚವನ್ನು ತ್ಯಜಿಸುವುದು ಮಾತ್ರವಲ್ಲ, ಅದನ್ನು ಭಗವನ್ಮಯವಾಗಿ ಮಾಡಿಕೊಳ್ಳುವುದು. ನಾವು ಪ್ರಪಂಚವನ್ನು ಭಗವನ್ಮಯವನ್ನಾಗಿ ಮಾಡಿಕೊಂಡಾಗ, ಅಲ್ಲಿ ಕೇವಲ ಭಗವಂತನನ್ನು ಮಾತ್ರವೇ ನೋಡುವೆವು. ಹಾಗೆಂದೇ ಈಶೋಪನಿಷತ್ತು ಹೀಗೆ ಹೇಳುವುದು: **ಈಶಾವಾಸ್ಯಮಿದಂ ಸರ್ವಂ** – "ಪ್ರಪಂಚದಲ್ಲಿ ಏನಿರುವುದೋ ಅದನ್ನೆಲ್ಲ ದೇವರಿಂದ ಆವರಿಸಿಬಿಡಬೇಕು" ಎಂದು. ನಾವು ಏನನ್ನು ತ್ಯಜಿಸಬೇಕು? ಜಗತ್ತಿನ ಬಗೆಗಿನ ನಮ್ಮ ತಪ್ಪುಧೋರಣೆಯನ್ನು ತ್ಯಜಿಸಬೇಕು. ಆಗ ಮಾತ್ರ ನಾವು ಜಗತ್ತನ್ನು ಸಾಕ್ಷೀಭಾವದಿಂದ ನೋಡಲು ಸಾಧ್ಯ. ಆಗ ನಾವು ಈ ಜಗತ್ತಿನ ವಿದ್ಯಮಾನಗಳಿಗೆ ಅಂಟಿಕೊಳ್ಳುವುದಿಲ್ಲ. ಸ್ವಾಮೀಜಿ ಹೇಳುತ್ತಾರೆ, "ದೇವರನ್ನು ಎಲ್ಲೆಲ್ಲಿಯೂ ಕಂಡುಕೊಂಡು, ಅವನೇ ಸರ್ವಸ್ವ ಎಂದು ಭಾವಿಸಿ, ಕೆಲಸ ಮಾಡಿ ಎನ್ನುತ್ತದೆ, ವೇದಾಂತ. ಜೀವನವನ್ನು ಪವಿತ್ರಗೊಳಿಸಿ, ಅದೇ ದೇವರೆಂದು ನೋಡುತ್ತ, ಬಿಡುವಿಲ್ಲದೆ ಕೆಲಸಮಾಡಿ... ದೇವರೇ ಸರ್ವಸ್ವ, ಅವನನ್ನು ಅರಸಲು ಮತ್ತೆಲ್ಲಿ ಹೋಗಬೇಕು? ಅವನಾಗಲೇ ಪ್ರತಿಯೊಂದು ಕ್ರಿಯೆಯಲ್ಲಿಯೂ, ಆಲೋಚನೆಯಲ್ಲಿಯೂ ಇರುವನು. ಈ ದೃಷ್ಟಿಯಿಂದ ಕೆಲಸ ಮಾಡಬೇಕು. ಇದೊಂದೇ ಉಪಾಯ. ಬೇರೆ ಮಾರ್ಗವೇ ಇಲ್ಲ. ಕರ್ಮಫಲ ಆಗ ನಮ್ಮನ್ನು ಬಂಧಿಸುವುದಿಲ್ಲ. ನಮ್ಮ ಸಂಕಟ, ದೋಷ ಇವಕ್ಕೆಲ್ಲ ಕಾರಣ ಕೆಲಸಕ್ಕೆ ಬಾರದ ಆಸೆಗಳೆಂಬುದನ್ನು ನಾವು ಆಗಲೇ ನೋಡಿರುವೆವು. ಆದರೆ ಇದನ್ನು ಭಗವಂತನ ಮೂಲಕ ದೈವೀಸ್ವರೂಪಕ್ಕೆ ತಂದರೆ, ಪರಿಶುದ್ಧವನ್ನಾಗಿ ಮಾಡಿದರೆ, ಅದರಿಂದ ಯಾವ ದೋಷವೂ ಬರುವುದಿಲ್ಲ, ಯಾವ ದುಃಖವೂ ಬರುವುದಿಲ್ಲ." ಇಂಥ ಒಂದು ಆದರ್ಶವನ್ನು ಇಟ್ಟುಕೊಂಡು ಜೀವನ ಮಾಡಬೇಕು. ಆದರ್ಶವನ್ನು ಇಟ್ಟುಕೊಳ್ಳುವುದೆಂದರೆ ಅದನ್ನು ಸಾಧಿಸಲು ಪ್ರಯತ್ನಿಸುವುದು; ಆ ಮೂಲಕ ಬೆಳೆಯುತ್ತ ಹೋಗುವುದು. ಬೆಳವಣಿಗೆಯೇ ಜೀವನದ ಏಕಮೇವ ಆವಶ್ಯಕತೆ. ಆಗ ಅಲ್ಪ ಸ್ವಲ್ಪ ತಪ್ಪುಗಳಾದರೂ ಪರವಾಗಿಲ್ಲ. ಅದು ಆದರ್ಶವನ್ನೇ ಇಟ್ಟುಕೊಳ್ಳದಿರುವುದಕ್ಕಿಂತ ಎಷ್ಟೋ ಮೇಲು. ಹೀಗಾಗಿ ಆದರ್ಶವನ್ನು ಇಟ್ಟುಕೊಳ್ಳುವುದೇ ಒಳ್ಳೆಯದು; ಇದರಿಂದ ಸಾರ್ಥಕ ಜೀವನವನ್ನು ನಡೆಸಬಲ್ಲೆವು.

**ಆತ್ಮಸಾಕ್ಷಾತ್ಕಾರ:** ಧರ್ಮವೆಂಬುದು ಸತ್ಯಸಂಗತಿ, ಅದು ಬರಿಯ ವಾದವಿವಾದವಲ್ಲ ಎಂದು ಸ್ವಾಮೀಜಿ ಹೇಳುತ್ತಾರೆ. ನಮ್ಮನ್ನು ನಾವೇ ಪರೀಕ್ಷಿಸಿಕೊಂಡು, ನಮ್ಮ ಅಂತರಾಳದಲ್ಲಿರುವ ಅಗಾಧ ಶಕ್ತಿಯ ಬಗ್ಗೆ ಅರಿತುಕೊಳ್ಳಬೇಕು. ತಿಳಿದುಕೊಂಡದ್ದನ್ನು ಅನುಷ್ಠಾನಕ್ಕೆ ತರಬೇಕು. ಇದೇ ಧರ್ಮ. ಈ ಬಗೆಯ ಧರ್ಮದಲ್ಲಿ ಆತ್ಮಸಾಕ್ಷಾತ್ಕಾರವೇ ಮಹಾನ್ ಆದರ್ಶ. ಧರ್ಮವು ಶಾಸ್ತ್ರದಲ್ಲಿಲ್ಲ, ದೇವಸ್ಥಾನದಲ್ಲಿಲ್ಲ. ಧರ್ಮವೆಂದರೆ ಸಾಕ್ಷಾತ್ಕಾರ. ಯಾರು ನಿಜವಾಗಿ ದೇವರನ್ನು ಮತ್ತು ಆತ್ಮವನ್ನು ನೋಡಿರುವರೋ ಅವರೇ ಧಾರ್ಮಿಕರು. ಹಾಗೆಂದೇ ಸ್ವಾಮೀಜಿ ಇಡೀ ಮಾನವಜನಾಂಗಕ್ಕೆ ಈ ಕರೆಯನ್ನು ಕೊಡುತ್ತಾರೆ: **"ಧರ್ಮವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಿ. ಬಾಯಿಮಾತಿನಿಂದ ಪ್ರಯೋಜನವಿಲ್ಲ. ಇದೇ ವೇದಾಂತ ಬೋಧನೆಯ ಪಲ್ಲವಿ."** ಭಗವಂತನ ಮಹಾನತೆಯು ಎಲ್ಲೆಲ್ಲಿಯೂ ಇರುವುದು. ಆದರೆ ಆತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದುದು ನಮ್ಮ ಆತ್ಮದಲ್ಲಿಯೇ. ಸ್ವಾಮೀಜಿ ಹೀಗೆ ಕರೆನೀಡುತ್ತಾರೆ: "ತ್ಯಾಗವೇ ಸತ್ಯಜೀವನದ ಆಧಾರ. ನಮ್ಮ ಅಲ್ಪ ಅಹಂಕಾರವನ್ನು ತೊರೆದಾಗ ಮಾತ್ರ ನಾವು ಸುಖ ಸಂತೋಷಗಳನ್ನು ನಿಜವಾಗಿ ಅನುಭವಿಸುವೆವು. (ಭಗವಂತನಿಂದ) ಪ್ರತ್ಯೇಕವಾದ ಈ ಅಲ್ಪತೆಯ ಜೀವನವು ನಾಶವಾಗಬೇಕು. ಆಗ ಮಾತ್ರ ನಾವು ಸತ್ಯದಲ್ಲಿರುವೆವು. ಸತ್ಯವೇ ದೇವರು. ಅದೇ ನಮ್ಮ ನಿಜವಾದ ಸ್ವಭಾವ. ನಾವು ಭಗವಂತನಲ್ಲಿ ಬಾಳೋಣ, ಅವನಲ್ಲಿ ನಿಲ್ಲೋಣ. ನಮ್ಮ ಬಾಳುವೆಯ ಆನಂದದ ಸ್ಥಿತಿ ಇದೊಂದೇ. ಆಧ್ಯಾತ್ಮಿಕ ತಳ